**ವಿಷಯ:** ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 134 ಗ್ರಾಪಂಕಾ 2014, ದಿನಾಂಕ: 24.04.2014.
2. ಅಪರ ನಿಬಂಧಕರು, ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/ INQ/14-A/279/2014/ARE-16, ದಿನಾಂಕ: 06.04.2021.
3. ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ INQ / 14-A / 279 / 2014 / ARE-16, ದಿನಾಂಕ: 07.04.2021.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 61 ಗ್ರಾಪಂಕಾ 2021, ದಿ: 08.06.2021.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ಉತ್ತರ ದಿನಾಂಕ:10.08.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಎ.ವೈ.ವಡ್ರಳ್ಳಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಈ ಕೆಳಕಂಡ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿತ್ತು.

**" ದೋಷಾರೋಪಣೆ":-**

01. As shown in detail in I.O's report, yor DGO, during 2005-06, 40 beneficiaries had been identified under Ashraya Scheme. But, out of them, only 2 beneficiaries were not having houses. Whereas, family members of other 38 beneficiaries had houses already, to whom houses had been allotted;

02. You DGO, during 2006-07, 60 beneficiaries have been identified under Ashraya Scheme, but out of them, only 5 beneficiaries had no houses. Whereas, family members of other beneficiaries had houses already, to whom houses had been allotted;

03. You DGO payment has been made to beneficiaries (a) Smt. Laxmavva Mallappa Maadar; (b) Smt. Majula Basappa Maadar and (c) Smt. Sankravva Kallappa Talawar, thorugh they had not constructed the houses.;

..2

04.You DGO has not made any entry in the Panchayath property Register for the houses constructed under Ashraya Scheme.

And thereby you DGO has failed to maintain absolute integrity and devetion to duty and committed an act which is unbecoming of a Government Servant and thus you are guilty of misconduct under Rule 3(1) (i) to (iii) of KCS (Conduct) Rules 1966."

ಮೇಲೆ ಓದಲಾದ ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ ಶ್ರೀ ಎ.ವೈ.ವಡ್ರಳ್ಳಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರು ಅಂಗೀಕರಿಸಿ, ಶ್ರೀ ಎ.ವೈ.ವಡ್ರಳ್ಳಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್ ಇವರು ದಿನಾಂಕ: 31.05.2020 ರಂದು ನಿವೃತ್ತಿ ಹೊಂದಿದ್ದು, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ " ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ದಂಡನೆ " ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ 2ನೇ ಕಾರಣ ಕೇಳುವ ನೋಟೀಸಿಗೆ ಆಪಾದಿತ ನೌಕರರು ಸಮಾಜಾಯಿಷಿಯನ್ನು ಸಲ್ಲಿಸಿದ್ದು, ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆಯನ್ನು ಮತ್ತು ಲೋಕಾಯುಕ್ತ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ ಆಪಾದಿತರು ವಿಚಾರಣಾ ಸಮಯದಲ್ಲಿ ನೀಡಿರುವ ಹೇಳಿಕೆಯನ್ನೇ ಪುನರಾವರ್ತಿಸಿರುವುದು ಕಂಡು ಬಂದಿರುತ್ತದೆ ಮತ್ತು ಅವರ ಹೇಳಿಕೆಯಲ್ಲಿ ಅವರನ್ನು ದೋಷಮುಕ್ತಗೊಳಿಸಲು ಪರಿಗಣಿಸಬಹುದಾದಂತಹ ಯಾವುದೇ ಪೂರಕ ಅಂಶ, ದಾಖಲೆಗಳು ಕಂಡು ಬರುವುದಿಲ್ಲ.

ಈ ಪ್ರಕರಣದ ಬಗ್ಗೆ ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತರವರು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ಧ ಆರೋಪವು ಸಾಬೀತಾಗಿರುವುದಕ್ಕೆ ಸಂಬಂಧಿಸಿದಂತೆ ವಿವರವಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಮಾನ್ಯ ಉಪ ಲೋಕಾಯುಕ್ತರವರ ವಿಚಾರಣೆಯಲ್ಲಿಯೂ ಕೂಡ ಎದುರುದಾರರು ತಮ್ಮ ಮೇಲಿನ ಆರೋಪಗಳಲ್ಲಿ ಯಾವುದೇ ಹುರುಳಿಲ್ಲವೆಂದು ಸಮರ್ಥಿಸಿಕೊಳ್ಳಲು ವಿಫಲರಾಗಿರುತ್ತಾರೆ ಹಾಗೂ ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರು ವಿಚಾರಣಾ ವರದಿಯನ್ನು ಅಂಗೀಕರಿಸಿ, ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ " ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ದಂಡನೆ " ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

..3

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ, ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸನ್ನು ಪರಿಶೀಲಿಸಿ, ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಮಾನ್ಯ ಉಪಲೋಕಾಯುಕ್ತರವರು ಶಿಫಾರಸ್ಸು ಮಾಡಿರುವಂತೆ " ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ದಂಡನೆ " ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 61 ಗ್ರಾಪಂಕಾ 2021, ಬೆಂಗಳೂರು, ದಿನಾಂಕ:-11.01.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ನಿಯಮ 214(1)(ಬಿ) ರನ್ವಯ " **ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ದಂಡನೆ** " (For imposing penalty of withholding 10% of pension payable to DGO Sri A.Y Vadralli for a period of 5 Years ) ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/1/22
(ಚೇತನ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ,</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು-16, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಳಗಾವಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಯಭಾಗ, ಬೆಳಗಾವಿ ಜಿಲ್ಲೆ.
   ಶ್ರೀ ಎ.ವೈ.ವಡ್ರಳ್ಳಿ, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತ್, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ (**ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ರಾಯಬಾಗ, ಬೆಳಗಾವಿ ಜಿಲ್ಲೆ ಇವರ ಮುಖಾಂತರ**)
6. ಗಣಕ ಕೋಶ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ/ಪ್ರತಿ.